# ಕರ್ನಾಟಕ ಲೋಕಾಯುಕ್ತ

ಸಂಖ್ಯೆ. ಕಂಪ್ಲೆಂಟ್:ಉಪಲೋಕ್/ಜಿಎಲ್‌ಬಿ-7801/2015/ಎ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:05-01-2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ ಶಿವಶಂಕರಪ್ಪ, ಕೆ. ತಹಸೀಲ್ದಾರರು, ದೇವದುರ್ಗ, ರಾಯಚೂರು ಜಿಲ್ಲೆ ಮತ್ತು 2) ಶ್ರೀ ಅನಿಲ್‌ಕುಮಾರ್, ಕಂದಾಯ ನಿರೀಕ್ಷಕರು, ತಾಲ್ಲೂಕು ಕಛೇರಿ, ದೇವದುರ್ಗ, ರಾಯಚೂರು ಜಿಲ್ಲೆ – ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ವರ್ತನೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

---

1. ಶ್ರೀ ಹನುಮನಗೌಡ ಬಿನ್ ಹನುಮಂತರಾಯ, ಸಾ:ಕಾಕರಗಲ್, ಸಂಕೇಶ್ವರಹಾಳ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ತಹಶೀಲ್ದಾರರು, ದೇವದುರ್ಗ ಇವರ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ವಿರುದ್ಧ, ಅವರ ದುರ್ನಡತೆಯ ಬಗ್ಗೆ ಆರೋಪಿಸಿ ದೂರು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯಿದೆ, 1987ರ ಕಲಂ 9ರನ್ವಯ ತನಿಖೆಯನ್ನು ತೆಗೆದುಕೊಳ್ಳಲಾಗಿದೆ.

2. ದೂರುದಾರರ ಹೇಳಿಕೆಯಂತೆ, ಅವರ ಜಮೀನು ಸರ್ವೇ ನಂ.382ರಲ್ಲಿ 3.15 ಎಕರೆ ವಿಸ್ತೀರ್ಣದಲ್ಲಿ ಬೆಳೆದ ಹತ್ತಿ ಬೆಳೆ ಧಾರಾಕಾರ ಮಳೆಯಿಂದ ಸಂಪೂರ್ಣವಾಗಿ ಕೊಚ್ಚಿ ಹೋಗಿ ನಷ್ಟವಾಗಿರುತ್ತದೆ ಮತ್ತು ಆ ನಷ್ಟದ ಬಗ್ಗೆ ಪರಿಹಾರ ನೀಡಲು ದೇವದುರ್ಗ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಿದರೂ ಯಾವ ಪರಿಹಾರ ನೀಡಿರುವುದಿಲ್ಲ ಎಂದು ಆಪಾದನೆ ಮಾಡಿರುತ್ತಾರೆ.

3. ಈ ಪ್ರಕರಣದ ತನಿಖೆಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರುರವರಿಗೆ (ಇನ್ನು ಮುಂದೆ ತನಿಖಾಧಿಕಾರಿಗಳು ಎಂದು ಕರೆಯಲ್ಪಡುತ್ತಾರೆ) ವಹಿಸಲಾಗಿತ್ತು. ಅದರಂತೆ, ತನಿಖಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ.

4. ದೂರಿನಲ್ಲಿನ ಆಪಾದನೆಗಳನ್ನು, ತನಿಖಾ ವರದಿಯನ್ನು ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, 2014ರಲ್ಲಿ ಬಿದ್ದ ಮಳೆಯಿಂದ ದೂರುದಾರರ ಜಮೀನಿನ ಹತ್ತಿ ಬೆಳೆ ನಾಶವಾಗಿದ್ದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕಂದಾಯ ನಿರೀಕ್ಷಕರು ಸ್ಥಳ ತನಿಖೆ ಮಾಡಿ, ಶೇ.46ರಷ್ಟು ಬೆಳೆ ನಷ್ಟವಾಗಿದೆ ಎಂದು ದೃಢೀಕರಿಸಿದ ಆಧಾರದ ಮೇಲೆ ತಹಶೀಲ್ದಾರ್, ದೇವದುರ್ಗರವರು ಸರ್ಕಾರಿ ಸುತ್ತೋಲೆಯ ಪ್ರಕಾರ ಪರಿಹಾರ ನೀಡಲು ಬರುವುದಿಲ್ಲವೆಂದು ಈ ದೂರುದಾರರಿಗೆ ಮತ್ತು ಅದೇ ತರಹ ಬೆಳೆ ನಷ್ಟ ಹೊಂದಿದ ಜಮೀನುದಾರರಿಗೆ ಹಿಂಬರಹ ನೀಡಿರುತ್ತಾರೆ.

5. ಸರ್ಕಾರಿ ಸುತ್ತೋಲೆ ಸಂಖ್ಯೆ: 32-3/2013-ಎನ್‌ಡಿಎಂ-1, ದಿನಾಂಕ 28.11.2013ರ ಮಾರ್ಗಸೂಚಿಯ ಆದೇಶವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿ, ಸದರಿ ಆದೇಶದ ಕ್ರಮ ಸಂಖ್ಯೆ.5(i)(B) ರಂತೆ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನ ಬೆಳೆ ಪ್ರಕೃತಿ ವಿಕೋಪದಿಂದ ಶೇ.50ರಷ್ಟು ಬೆಳೆ ನಷ್ಟವಾದ ಸಂದರ್ಭದಲ್ಲಿ ಮಳೆ ಆಶ್ರಿತ ಜಮೀನಿನ ರೈತರಿಗೆ ಒಂದು ಎಕರೆಗೆ ರೂ.4500/- ಪರಿಹಾರ ಧನ ನೀಡಲು ಅವಕಾಶವಿರುತ್ತದೆ. ಅದಲ್ಲದೇ, ಅದೇ ಕ್ರಮ ಸಂಖ್ಯೆ.5(ii) ರ ಪ್ರಕಾರ ಪ್ರಕೃತಿ ವಿಕೋಪದಿಂದ ಶೇ.50ಕ್ಕಿಂತ ಜಾಸ್ತಿ ಬೆಳೆ ನಾಶವಾದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲದ ರೈತರಿಗೆ ಸಹ ಒಂದು ಹೆಕ್ಟೇರ್‌ಗೆ ಸೀಮಿತಗೊಳಿಸಿ, ರೂ.4500/- ರವರೆಗೆ ಪರಿಹಾರ ಹಣ ನೀಡಬಹುದಾಗಿರುತ್ತದೆ. ಆದರೂ ಸಹ ಈ ಪ್ರಕರಣದಲ್ಲಿ ದೂರುದಾರರ ಒಟ್ಟು ಜಮೀನು ಸರ್ವೆ ನಂ.382 ಮಸರಕಲ್ ಗ್ರಾಮದ ವಿಸ್ತೀರ್ಣ 3.15 ಎಕರೆಯಲ್ಲಿ 2014ನೇ ಸಾಲಿನಲ್ಲಿ ಹತ್ತಿ ಬೆಳೆಯನ್ನು ಬೆಳೆದಿದ್ದು ಮತ್ತು ಅದರಲ್ಲಿನ 1.15 ಎಕರೆಯ ಹತ್ತಿ ಬೆಳೆ ಆಗಸ್ಟ್-29ರಿಂದ 31ನೇ ಆಗಸ್ಟ್ 2014ರಲ್ಲಿ ಬಿದ್ದ ಭಾರಿ ಮಳೆಗೆ ನಷ್ಟವಾಗಿರುವ ಬಗ್ಗೆ , ಗ್ರಾಮ ಲೆಕ್ಕಾಧಿಕಾರಿಗಳು, ಮಸರಕಲ್ ಮತ್ತು ಕಂದಾಯ ನಿರೀಕ್ಷಕರು, ದೇವದುರ್ಗರವರು ಮಾಡಿದ ಮಹಜರ್‌ನಲ್ಲಿ ಕಂಡುಬಂದಿರುತ್ತದೆ. ಹೀಗಿದ್ದರೂ ಸಹ, ಅಸಮರ್ಪಕವಾಗಿ 46% ನಷ್ಟವಾಗಿದೆ ಎಂದು ತೀರ್ಮಾನ ಮಾಡಿದಂತೆ ತಹಶೀಲ್ದಾರರು ದೂರುದಾರರಿಗೆ ಮತ್ತು ಇನ್ನಿತರರಿಗೆ ದಿನಾಂಕ 19.01.2015ರಂದು ಹಿಂಬರಹ ನೀಡಿದ್ದು ಅದು ಸಮಂಜಸವಾಗಿರುವುದಿಲ್ಲ. ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಯನ್ನು ಗಮನಿಸಿದಾಗ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲದ ರೈತರ ಜಮೀನಿನಲ್ಲಿ ಬೆಳೆ ನಷ್ಟ ಹೊಂದಿದಾಗ ಒಂದು ಹೆಕ್ಟೇರ್‌ವರೆಗಿನ ಬೆಳೆ ನಷ್ಟಕ್ಕೆ ಸರ್ಕಾರದಿಂದ ಪರಿಹಾರ ನೀಡಲು ಅವಕಾಶ ಮಾಡಿಕೊಟ್ಟಿರುತ್ತದೆ. ಈ ಪ್ರಕರಣದಲ್ಲಿ ದೂರುದಾರರಿಗೆ 1.15 ಎಕರೆ ಜಮೀನಿನ ಪೂರ್ತಿ ಹತ್ತಿ ಬೆಳೆ ನಷ್ಟವಾಗಿದ್ದರೂ ಸಹ ಅಸಮರ್ಪಕವಾಗಿ ಕೇವಲ 46% ಬೆಳೆ ನಷ್ಟವಾಗಿದೆ

ಎಂದು ತೀರ್ಮಾನಿಸಿ, ಅವರಿಗೆ ಪರಿಹಾರ ನೀಡುವುದಕ್ಕೆ ಬರುವುದಿಲ್ಲವೆಂದು ಹಿಂಬರಹ ನೀಡಿದ್ದು, ಸದರಿ ಸುತ್ತೋಲೆಯ ಮಾರ್ಗಸೂಚಿಗೆ ವ್ಯತಿರಿಕ್ತವಾಗಿರುತ್ತದೆ.

6. ಮೇಲ್ಕಂಡ ಕಾರಣಗಳಿಂದ, ಈ ಪ್ರಕರಣದಲ್ಲಿ, ಶ್ರೀ ಅನಿಲ್ ಕುಮಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ದೇವದುರ್ಗ ಇವರನ್ನು 2ನೇ ಎದುರುದಾರರನ್ನಾಗಿ ಸೇರಿಸಿಕೊಂಡು, 1 ಮತ್ತು 2ನೇ ಎದುರುದಾರರಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

7. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಸರ್ಕಾರದ ಸುತ್ತೋಲೆಯಂತೆ ಬೆಳೆ ಹಾನಿ ಪ್ರಮಾಣ ಶೇಕಡ 50% ಕಡಿಮೆ ಇದ್ದಲ್ಲಿ ಪರಿಹಾರ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

8. ದೂರಿನಲ್ಲಿನ ಆಪಾದನೆಗಳು, ತನಿಖಾ ವರದಿ ಮತ್ತು ಅದಕ್ಕೆ ಲಗತ್ತಾದ ದಾಖಲಾತಿಗಳು ಮತ್ತು 1ನೇ ಎದುರುದಾರರ ಆಕ್ಷೇಪಣೆಯನ್ನು ಕೂಲಕಂಷವಾಗಿ ಪರಿಶೀಲನೆ ಮಾಡಲಾಯಿತು.

9. ಈ ಪರಿಹಾರ ಕಡತವನ್ನು ನಿರ್ವಹಣೆ ಮಾಡುವಲ್ಲಿ 1ನೇ ಎದುರುದಾರ/ಶ್ರೀ ಶಿವಶಂಕರಪ್ಪ, ಕೆ. ತಹಶೀಲ್ದಾರ್, ದೇವದುರ್ಗ ರವರು, 2ನೇ ಎದುರುದಾರ/ಶ್ರೀ ಅನಿಲ್ ಕುಮಾರ್, ಕಂದಾಯ ನಿರೀಕ್ಷಕರು, ದೇವದುರ್ಗ ರವರ ವರದಿಯನ್ನು ಮಾತ್ರ ಪರಿಗಣಿಸಿ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ನಿರ್ದೇಶನವಿದ್ದರೂ ಸಹ ದೂರುದಾರರ ಬೆಳೆ ನಷ್ಟ 46% ಎಂದು ತೀರ್ಮಾನಿಸಿದ್ದು ಕರ್ತವ್ಯ ಲೋಪ ಕಂಡು ಬರುತ್ತದೆ. 1ನೇ ಎದುರುದಾರ/ಶ್ರೀ ಶಿವಶಂಕರಪ್ಪ ತೀರ್ಮಾನ ಮಾಡುವಾಗ 2ನೇ ಎದುರುದಾರ/ಶ್ರೀ ಅನಿಲ್ ಕುಮಾರ್, ಕಂದಾಯ ನಿರೀಕ್ಷಕರು, ತಾವೇ ಗ್ರಾಮಲೆಕ್ಕಾಧಿಕಾರಿಯಾಗಿ ಮತ್ತು ಕಂದಾಯ ನಿರೀಕ್ಷಕರಾಗಿ ಸಹಿ ಮಾಡಿದ್ದ ಮಹಜರ್‌ನ್ನು ಸಲ್ಲಿಸಿದ್ದನ್ನು ಕೂಲಕಂಷವಾಗಿ ಪರಿಶೀಲನೆ ಮಾಡಿರುವುದಿಲ್ಲವೆಂದು ಕಂಡು ಬರುತ್ತದೆ. ಆ ರೀತಿ ಮಾಡಲಾದ ಮಹಜರ್‌ಗೆ ಯಾವ ದಿನಾಂಕವಿರುವುದಿಲ್ಲ ಮತ್ತು ಅದನ್ನು ರಾಜಸ್ವ ನಿರೀಕ್ಷಕರು ಸ್ಥಳಕ್ಕೆ ಹೋಗದೇ ಪರಿಶೀಲನೆ ಮಾಡದೇ ನೆಪ ಮಾತ್ರಕ್ಕೆ ಒಂದು ಮಹಜರ್‌ನ್ನು ತಯಾರಿಸಿ ಕೊಟ್ಟಿದ್ದು, ಮತ್ತು ಅದನ್ನು 1ನೇ ಎದುರುದಾರರು ಕೂಲಕಂಷವಾಗಿ ಪರಿಶೀಲನೆ ಮಾಡದೇ ಒಪ್ಪಿಕೊಂಡಿದ್ದು ಕರ್ತವ್ಯ ಲೋಪ ಕಂಡು ಬರುತ್ತದೆ. ಅದಲ್ಲದೇ, 2ನೇ ಎದುರುದಾರರು ಆ ರೀತಿ ನೆಪ ಮಾತ್ರಕ್ಕೆ ಒಂದು ಮಹಜರ್‌ನ್ನು ಮಾಡಿ ಅರ್ಹರಿಗೆ ಸರ್ಕಾರಿ ಸುತ್ತೋಲೆ ಪ್ರಕಾರ ಪರಿಹಾರ ನೀಡುವಲ್ಲಿ ಕರ್ತವ್ಯ

ಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ 1ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಒಪ್ಪಲು ಯಾವುದೇ ಸಮಂಜಸವಾದ ಕಾರಣಗಳು ಇರುವುದಿಲ್ಲ.

10. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. 1 ಮತ್ತು 2ನೇ ಎದುರುದಾರರು- 1) ಶ್ರೀ ಶಿವಶಂಕರಪ್ಪ, ಕೆ. ತಹಸೀಲ್ದಾರರು, ದೇವದುರ್ಗ, ರಾಯಚೂರು ಜಿಲ್ಲೆ ಮತ್ತು 2)ಶ್ರೀ ಅನಿಲ್‌ಕುಮಾರ್, ಕಂದಾಯ ನಿರೀಕ್ಷಕರು, ತಾಲ್ಲೂಕು ಕಛೇರಿ, ದೇವದುರ್ಗ, ರಾಯಚೂರು ಜಿಲ್ಲೆ ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ) ನಿಯಮ 1966 ರ ನಿಯಮ 3(1) (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 8/1

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು-1,
ಕರ್ನಾಟಕ ರಾಜ್ಯ, ಬೆಂಗಳೂರು.